**OS.No.   19/2023**                                                          **ಪಿ ಡಬ್ಲೂಃ  1**

ದಿಃ  30-06-2026 ರಂದು ಸಾಕ್ಷಿಯನ್ನು ಕರೆಯಿಸಿ  ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು:-** ಪ್ರತಿವಾದಿಪರ ವಕೀಲರಿಂದಃ-

ರಮೇಶಬಾಬು ತಂ. ಬಾಳಕ್ರಿಷ್ಟಯ್ಯ ಮತ್ತು 2 ನೇ ವಾದಿಯರು ನನ್ನ ತಮ್ಮಂದಿರು. ನನ್ನ ತಮ್ಮನಾದ ರಮೇಶಬಾಬು ತಂ. ಬಾಳಕ್ರಿಷ್ಟಯ್ಯ ಅವರು ನನಗೆ ಈ ದಾವೆಯನ್ನು ಸಲ್ಲಿಸಲು ಮೌಖಿಕವಾಗಿ ತಿಳಿಸಿರುತ್ತಾರೆ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯವರು ಅತಿಕ್ರಮಣ ಮಾಡಿದಾಗ ನನ್ನ ತಮ್ಮನಾದ ರಮೇಶ ಬಾಬು ಇವರು ಊರಲ್ಲಿ ಇಲ್ಲದಿರುವ ಕಾರಣ ಅವರಿಗೆ ಈ ದಾವೆಯಲ್ಲಿ ಕಕ್ಷಿದಾರರನ್ನಾಗಿ ಮಾಡಿಲ್ಲ. ಪ್ರತಿವಾದಿಯವರು ದಾವಾ ಸ್ವತ್ತಿನಲ್ಲಿ ಎಂದಿಗೂ ಅತಿಕ್ರಮಣ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾವು ಮೂರು ಜನ ಅಣ್ಣ-ತಮ್ಮಂದಿರು ಕೂಡಿಕೊಂಡು ಸಾಗುವಳಿ ಮಾಡುತ್ತಿದ್ದೇವು. ದಾವಾ ಸ್ವತ್ತಿನಲ್ಲಿ ಎಷ್ಟು ಗುಂಟೆ ಒತ್ತುವರಿ ಮಾಡಿದ್ದಾರೆ ಎಂದು ಸೂಚಿಸಿದಾಗ ಸಾಕ್ಷಿಯು ಪೂರ್ತಿ ಜಮೀನು ಕಬ್ಜಾ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರು ಫೆಬ್ರುವರಿ 2023 ರಂದು ದಾವಾ ಸ್ವತ್ತಿನಲ್ಲಿ ಅತಿಕ್ರಮಣ ಮಾಡಿರುತ್ತಾರೆ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ವ್ಯಯಕ್ತಿಕವಾಗಿ ಉಳಿಮೆ ಮಾಡುತ್ತೇನೆ. ನಾವು ದಾವಾ ಸ್ವತ್ತಿನಲ್ಲಿ OS No. 120/2007 ರಲ್ಲಿನ ಡಿಕ್ರಿ ಪ್ರಕಾರ ಪಾಲ ಮಾಡಿಕೊಂಡಿದ್ದೇವೆ ಎಂದರೆ ಸರಿ. ನಾನು ಮತ್ತು ನನ್ನ ತಮ್ಮಂದಿರು ದಾವಾ ಸ್ವತ್ತಿನ ಜಂಟಿ ಮಾಲಿಕನಾಗಿದ್ದು ಹಾಗೂ ಜಂಟಿ ಕಬ್ಜೆಯಲ್ಲಿರುವುದಾಗಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾಲೂಕಿನಲ್ಲಿ ನಾನು ಬಹಳ ಪ್ರಭಾವಶಾಲಿ ವ್ಯಕ್ತಿ ಆಗಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಮ್ಮನಾದ ರಮೇಶ ಬಾಬು ರವರ ಪ್ರತಿವಾದಿಯೊಂದಿಗೆ ಸಂಬಂಧ ಚೆನ್ನಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ಖರೀದಿ ಪತ್ರದ ಆಧಾರದ ಮೇಲೆ ದಾವಾ ಸ್ವತ್ತಿನ ಕಬ್ಜೆಯಲ್ಲಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ಮೊದಲಿನಂತೆ ನನ್ನ ಮಾತು ಕೇಳದೆ ಇರುವುದರಿಂದ ಅವರಿಗೆ ಸತಾಯಿಸಬೇಕೆಂದು ದುರುದ್ದೇಶದಿಂದ ಸುಳ್ಳು ದಾವೆಯನ್ನು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸರ್ಕಾರದ ವಿರುದ್ಧವಾಗಿ ಇದೆ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದು ಅದು ಖಾರಿಜಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.  ಹೇ.  ಕೇ.  ಸರಿ.  ಇದೆ.**

**ಪ್ರ. ದ. ನ್ಯಾ . ದಂ. ಸೇಡಂ.**